ಪ್ರಧಾನ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ

ಸಿಸಿ ನಂಬ್ರಃ **439/2024**
ಸಿಡಬ್ಲ್ಯೂ- 06
ಪಿಡಬ್ಲ್ಯೂ- 07

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಕೃಷ್ಣ ಕುಲಾಲ್ |
| ತಂದೆಯ ಹೆಸರು | ಃ | ನಾಗು ಕುಲಾಲ್ |
| ಪ್ರಾಯ | ಃ | 39 ವರ್ಷ |
| ಉದ್ಯೋಗ | ಃ | ಹೊಟೇಲ್ |
| ವಾಸ | ಃ | ಶಂಕರನಾರಾಯಣ. |

ದಿನಾಂಕಃ **28-10-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಸಾಕ್ಷಿಗೆ ಈಗ ಎರಡು ದಾಖಲೆ ತೋರಿಸಿದ್ದು, ಸಾಕ್ಷಿ ಒಂದು ದಾಖಲೆಯನ್ನು ನೋಡಿ ತನ್ನ ಸಹಿ ಗುರುತಿಸಿದ್ದು, ಫೋಟೋವನ್ನು ನೋಡಿ ತಾನು ಇರುವುದಾಗಿ ನುಡಿದಿದ್ದು, ಎರಡೂ ದಾಖಲೆಗಳು ಈಗಾಗಲೇ ನಿಪಿ.9 ಹಾಗೂ 10 ಎಂದು ಗುರುತಿಸಲಾಗಿದ್ದು , ಸಾಕ್ಷಿ ಸಹಿಯನ್ನು ನಿಪಿ.9 ಬಿ ಎಂದು ಗುರುತಿಸಲಾಯಿತು. ಈಗ 2 ವರ್ಷಗಳ ಹಿಂದೆ ನಮ್ಮ ಅಂಗಡಿಯ ಸ್ವಲ್ಪ ಮುಂಭಾಗದಲ್ಲಿ ಕೆ ಎಸ್ ಆರ್ ಟಿ ಸಿ ಬಸ್ಸು ಹಾಗೂ ದ್ವಿಚಕ್ರ ವಾಹನದ ನಡುವೆ ಅಪಘಾತವಾಗಿದ್ದು ಪೊಲೀಸರು ಅಲ್ಲಿ ಬಂದಿದ್ದು ನಾನು ನೋಡಲು ಹೋದಾಗ ಪೊಲೀಸರು ನನ್ನ ಬಳಿ ನಿಪಿ.9 ಕ್ಕೆ ಸಹಿ ಪಡೆದುಕೊಂಡು ಸ್ಥಳದಲ್ಲೇ ಜನಿಪಿ.10 ರಂತೆ ಫೋಟೋ ತೆಗೆದಿರುತ್ತಾರೆ. ನಾನು ಅಪಘಾತವನ್ನು ನೋಡಿರುವುದಿಲ್ಲ. ತದನಂತರ ಹೋಗಿರುತ್ತೇನೆ. ಪೊಲೀಸರು ತೊಂದರೆ ಆಗುವುದಿಲ್ಲ, ಸಹಿ ಮಾಡು ಎಂದು ಹೇಳಿರುತ್ತಾರೆ. ನಿಪಿ.9 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುತ್ತದೆ. ಅಪಘಾತ ಸ್ಥಳವನ್ನು ಚಾ ಸಾ.2 ರವರು ಪೊಲೀಸರಿಗೆ ತೋರಿಸಿರುತ್ತಾರೆ. ಸಮಯ 12.00 ರಿಂದ 12.30 ರವರಿಗೆ ನಿಪಿ.9 ಕ್ಕೆ ಸಹಿ ಮಾಡಿರುತ್ತೇನೆ.

ಸಿಡಬ್ಲ್ಯೂ- 06
ಪಿಡಬ್ಲ್ಯೂ- 07

ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದ

2. ನಮ್ಮ ಮನೆಯಿಂದ ಘಟನಾ ಸ್ಥಳಕ್ಕೆ 15 ನಿಮಿಷ ಹೋಗಲು ಸಮಯಾವಕಾಶ ಬೇಕಾಗುತ್ತದೆ. ನಾನು ಘಟನೆಯ ಪ್ರತ್ಯಕ್ಷದರ್ಶಿ ಅಲ್ಲ. ಪೊಲೀಸರು ತಯಾರು ಮಾಡಿದ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಮಹಜರು ಮಾಡಿದ್ದನ್ನು ನಾನು ನೋಡಿರುವುದಿಲ್ಲ. ನಿಪಿ.9 ರಲ್ಲಿ ಏನು ಬರೆದಿದೆ ಎಂದು ಗೊತ್ತಿರುವುದಿಲ್ಲ.

ಮರು ವಿಚಾರಣೆಃ ಇಲ್ಲ

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ